At Ranjit
From 5-7-46
Bahoo Betiyan
ಕರಣದಿವ್ಯಾ — ನಿರ್ಮಲ
ಯಾಕೂಬ್ — ಪಾತ್ರವಹಿಸಿರುವ
ಬಹು – ಬೇಟಿಯೆ

Regd. No. M 1299 SATYAVADI Founded 1917

ಸತ್ಯವಾದಿ
SATYAVADI

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 239 | ಬುಧವಾರ 10—7—46 | ಬಿಡಿ ಪ್ರತಿ 3 ಪೈ

At Opera
From 6-7-46
LAVANGI
ರಾವ್ — ರುಕ್ಮಿಣಿ — ಜಯಮ್ಮ
ಪಾತ್ರವಹಿಸಿರುವ
ಲವಂಗಿ (ತಮಿಳು)

ಅಂಚೆ ನೌಕರರ ಕೇಳಿಕೆಗೆ ಹತ್ತು ಕೋಟಿ ರೂಪಾಯಿಗಳು ಬೇಕು

ಪೌರಸಭೆ

ಮೈಸೂರು ಜುಲೈ 10— ಕಳೆದ ಸಂಜೆ ಮೈಸೂರು ಪೌರಸಭೆಯ ವಿಶೇಷ ಅಧಿವೇಶನವು ಶ್ರೀ ರಾಮಚಂದ್ರರಾವ್ ಬೊಂಭೋರೆಯವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಶ್ರೀಗಳಾದ ಎಂ. ಆರ್. ಸಿ ಬಸಪ್ಪ, ಜಿ. ಜನಾರ್ದನ ನಾಯ್ಡುರವರು ಸಭೆಯಲ್ಲಿ ಭಾಗವಹಿಸಿದ್ದರು.

ಪೌರಸಭೆಯ ಮೋಟಾರು ವಾಹನ [illegible] ಸಭೆ ಸೇರಿದ್ದಿತು.

ಮದ್ರಾಸಿನ ಕಾರ್ಪೋರೇಷನ್ನಿನ ಮೋಟಾರು ವಾಹನಗಳ ಬಗ್ಗೆ ವಿಮೆ ಮಾಡುವುದು ಅವಶ್ಯವಿಲ್ಲವೆಂದು ಅಲ್ಲಿನ ಸರ್ಕಾರ ತಿಳಿಸಿರುವುದಾಗಿ ಶ್ರೀ ಅಗರಂ ರಂಗಯ್ಯನವರು 'ವೀಲ್' ಪತ್ರಿಕೆಯ ಸುದ್ದಿಯನ್ನು ಓದಿ ಅಧ್ಯಕ್ಷರಿಗೆ ಆ ಪತ್ರಿಕೆಯನ್ನು ಒಪ್ಪಿಸಿದರು.

ಶಾಸನ ಸಭೆಯಲ್ಲಿ ಮೋಟಾರು ವಾಹನಗಳ ವಿಚಾರವಾಗಿ ನಡೆದ ಚರ್ಚೆಯಲ್ಲಿ ಮಿಲಿಟರಿ ಮತ್ತು ಸರ್ಕಾರಿ ವಾಹನಗಳಿಗೆ ಈ ಕಾನೂನು ಅನ್ವಯಿಸುವುದಿಲ್ಲವೆಂದು ತಿಳಿಯಲಾಯಿತು. ಮತ್ತು ಬೆಂಗಳೂರು ಪೌರಸಭೆಯ ವಾಹನಗಳು ಈಗಾಗಲೇ ವಿಮೆ ಮಾಡಲ್ಪಟ್ಟಿದೆಯೆಂದು ಶ್ರೀ ಟಿ. ಮರಿಯಪ್ಪನವರು ತಿಳಿಸಿದರು.

ಸ್ಥಳೀಯ ಸಂಸ್ಥೆಗಳು ಸರ್ಕಾರವೇ ಅಲ್ಲವೇ ಮತ್ತು ಅವುಗಳ ಮೋಟಾರು ವಾಹನಗಳ ಮೇಲೆ ವಿಮೆ ಮಾಡುವುದು ಅವಶ್ಯವಿಲ್ಲವೇ ಎಂಬ ವಿಷಯದಲ್ಲಿ ಪತ್ರವ್ಯವಹಾರವನ್ನು ಸರ್ಕಾರದೊಡನೆ ನಡೆಸಬೇಕೆಂದು ಒಪ್ಪಲಾಯಿತು.

ಸರ್ಕಾರದಿಂದ ಉತ್ತರ ಬರುವವರೆಗೆ ಈ ಸಭೆಯನ್ನು ಮುಂದುವರಿಸಬೇಕೆಂದು ತೀರ್ಮಾನವಾಯಿತು.

ವಿವಿಧ ವಿಷಯ

ನವದೆಹಲಿ ಜುಲೈ 8 — ಜುಲೈ 11 ರಿಂದ ಮುಷ್ಕರ ಮಾಡಲಿರುವ ಅಂಚೆ ನೌಕರರ ಕೇಳಿಕೆ ಪೂರೈಕೆಗೆ 10.75 ಕೋಟಿ ರೂ ಬೇಕಾಗುವುದೆಂದು ಅಧಿಕಾರಿಯುತ ಅಂದಾಜಾಗಿದೆ. ಈಗ ಕೊಡುತ್ತಿರುವ ವಾರ್ಷಿಕ ಸಂಬಳದ ಬಿಲ್ಲು 8 ನರೆ ಕೋಟಿ ಇದಕ್ಕೆ ಸೇರಿಲ್ಲ. ಬಹುಕಾಲದಿಂದ ನಿರೀಕ್ಷಿಸಲ್ಪಟ್ಟಿದ್ದು ಈಗ ಬಂದಿರುವ ಆರ್ಥಾಡಿತ [illegible] ಹೋ 3.5 ಕೋಟಿ ರೂ. ದೊ[illegible] ಎಂದು ಹೇಳಲಾಗಿದೆ.

ಲಂಡನ್ ಜೂ 9— ಸರ್ ಎಂ. ವಿ. ಯವರ ಮುಖಂಡತ್ವದಲ್ಲಿ ಹೊರಟಿರುವ ಭಾರತ ತೃಗಾರಿಕಾ ನಿಯೋಗವು ಲಿವರ್ಪೂಲನ್ನು ತಲಪಿದೆ.

ಸಿಕಂದರಾಬಾದ್ ಜುಲೈ 9 — ಏಳು ವರ್ಷಗಳಿಂದ ನಿಂತಿದ್ದ ಸಿಕಂದರಾಬಾದಿನ ಕುದುರೆ ಜೂಜು ಮತ್ತೆ ನಾಳೆಯಿಂದ ಪ್ರಾರಂಭವಾಗುವುದು

ಮದರಾಸು ಜು 9 — ಮದರಾಸು ಅಂಚೆನೌಕರರು ಮುಷ್ಕರದಲ್ಲಿ ಭಾಗವಹಿಸುವುದಿಲ್ಲ.

ಪತ್ರಿಕಾ ಮಾಲೀಕ ಸಂಘ

ಬೆಂಗಳೂರು ಜುಲೈ 7 — ಈ ದಿವಸ 4 ಗಂಟೆಗೆ ಸೇರಬೇಕಾಗಿದ್ದ ಸಂಸ್ಥಾನ ಪತ್ರಿಕಾ ಮಾಲೀಕ ಮತ್ತು ಸಂಪಾದಕರ ಸಂಘದ ಸಾಧಾರಣ ಸಭೆಯು ಮುಂದುವರಿಸಲ್ಪಟ್ಟ ಶಾ|| 14 ರಲ್ಲಿ ಇಲ್ಲಿಯ ಸಂಸ್ಥಾನ ಪತ್ರಿಕೋದ್ಯೋಗಿ ಸಂಘದಲ್ಲಿ ಸೇರುವುದೆಂದು ಕಾರ್ಯಕರ್ತ ಶ್ರೀ ವೆಂಕೋಬರಾಯರು ತಿಳಿಸುತ್ತಾರೆ.

ಪೌರಸಭೆ

ಮೈಸೂರು ಜುಲೈ 10 — ಮುಂದುವರಿದ ಮೈಸೂರು ಪೌರಸಭೆಯ ಸಾಧಾರಣ ಅಧಿವೇಶನವು ಈ ಸಂಜೆ 4 ಘಂಟೆಗೆ ಸೇರುವುದು.

ವಿವಿಧ ವರ್ತಮಾನ

ಮೈಸೂರು ಜು 9 — ಬೆಳ್ಳಿಧಾರಣೆ ಸ್ವಲ್ಪ ತಗ್ಗಿದೆ.

ಬೊಂಬಾಯಿ ಜುಲೈ 9 — ಕಾಂಗ್ರೆಸ್ ಅಧ್ಯಕ್ಷ ಪಂ|| ನೆಹರೂರವರು ಕಾರ್ಯಕಾರಿ ಸಮಿತಿಯ ನೂತನ ಸದಸ್ಯರನ್ನು ಆರಿಸಿದ್ದಾರೆ. ರಾಜಾಜಿಗೂ ಶ್ರೀ ಕಮಲಾದೇವಿ ಚಟ್ಟೋಪಾಧ್ಯಾಯರಿಗೂ ಸ್ಥಳ ಸಿಕ್ಕಿದೆ.

ಜರ್ಮನಿಯಲ್ಲಿ ಕಳೆದ ಮಹಾಯುದ್ಧದಲ್ಲಿ 10 ಲಕ್ಷ ಪುರುಷರು ಮೃತರಾದುದರಿಂದ ಅಲ್ಲಿ ಪುರುಷರ ಅಭಾವ ಹೆಚ್ಚಿದೆಯೆಂದೂ ಕೆಲವೆಡೆ ಗಂಡಸರಿಗೆ ಎರಡರಷ್ಟು ಹೆಂಗಸರಿದ್ದಾರೆಂದು ಹೇಳಲಾಗಿದೆ.

ಪ್ಯಾರಿಸ್ ಜು 8 — ಶಾಂತಿ ಸಮ್ಮೇಳನದ ಬಗ್ಗೆ ಆಹ್ವಾನಗಳು 24 ಗಂಟೆಗಳೊಳಗೆ ಕಳುಹಿಸಲಾಗುವುದು. ಚೀನಾ ಬಿಟ್ಟು ಮಿಕ್ಕ 4 ಮಹಾರಾಷ್ಟ್ರಗಳು ಸಹಿ ಮಾಡುವುವು.

ಬೆಂಗಳೂರು ಜು 9— ಸಂಸ್ಥಾನದ ಅಂಚೆ ಕೆಲಸಗಾರರ ಸಂಘದವರು ಮುಷ್ಕರದಲ್ಲಿ ಭಾಗವಹಿಸಲು ತೀರ್ಮಾನಿಸಿರುವರು. ಈ ಬಗ್ಗೆ ಒಂದು ಕೇಂದ್ರ ಮುಷ್ಕರ ಸಮಿತಿಯೂ, ಪರಿಹಾರ ಸಮಿತಿಯೂ ರಚನೆಯಾಗಿದೆ.

ಮೈಸೂರು ಜೂ 9— ಆಹಾರ ಪರಿಸ್ಥಿತಿ ನೆಟ್ಟಗಿಲ್ಲದಿರುವದರಿಂದ ಶ್ರೀಮನ್ಮಹಾರಾಜರವರ ಈ ವರ್ಷದ ವರ್ಧಂತ್ಯುತ್ಸವ ಸಂಬಂಧದಲ್ಲಿ ನಡೆಯಬೇಕಾಗಿದ್ದ ಮೆರವಣಿಗೆಯನ್ನು ನಿಲ್ಲಿಸಲಾಗಿದೆ.

ಬೆಂಗಳೂರು ಜು 9— ಮೈಸೂರು ಸಂಸ್ಥಾನದ ಆಹಾರ ವ್ಯವಸ್ಥೆಯನ್ನು ಅಮೇರಿಕಾದ ಕ್ಷಾಮ ನಿಯೋಗದವರು ಪ್ರಶಂಸಿಸಿರುವರು.

ಲಾಹೋರು ಜು 7— ಇಲ್ಲಿ ಬಸಿಲಿನ ಝಳದಿಂದ ಮೂರು ಜನರು, ಮತ್ತು ಗಾಡಿಗೆ ಕಟ್ಟಿದ್ದ 15 ಕುದುರೆಗಳು ಪ್ರಾಣ ಹೋಯಿತು.

ಬಟ್ಟೆ ಅಂಗಡಿ ಮೇಲೆ ಧಾಳಿ

ಕುನ್ನೂರು ಜುಲೈ 8 — ಈಚೆಗೆ ಪೋಲಿಸರು ಅನೇಕ ಬಟ್ಟೆ ಮತ್ತು ಅಕ್ಕಿ ರೇಷ್ಮೆ ಅಂಗಡಿಗಳ ಮೇಲೆ ಧಾಳಿ ನಡೆಸಿ ಹೆಚ್ಚು ಶೇಖರಿಸಿರುವುದಕ್ಕೆ ವಿಚಾರಣೆಗೊಳಪಡಿಸಿದ್ದಾರೆ. ಈಗ ಮುಚ್ಚಿದ್ದ ಬಟ್ಟೆ ಮತ್ತು ಆಹಾರ ಪದಾರ್ಥ ಹೊರಗೆ ಬರುತ್ತಿದೆ.

ಜವಳಿ ವ್ಯಾಪಾರಿಗೆ ಶಿಕ್ಷೆ

ಸರಕಾರದಿಂದ ಕೈಸರಿಹಿಂದ್ ಪದಕ ಪಡೆದ ಈತನ ಗೋದಾಮಿನಲ್ಲಿಯ ಜವಳಿ ವ್ಯಾಪಾರಿಗಳಾದ ಪರಮೇಶೆಟ್ಟಿ ಕಾಡಪ್ಪ ಪಾಟೀಲ ಇವರಿಗೆ ನಿಯಂತ್ರಿತ ದರಕ್ಕಿಂತ ಹೆಚ್ಚಿನ ಬೆಲೆಗೆ 3|| ಗಜ ಅರಿವೆಯನ್ನು ಮಾರಿದ ಅಪಾದನೆಗಾಗಿ ಭಾರತ ಸಂರಕ್ಷಣೆ ಕಾನೂನು ಕೆಳಗೆ 100 ರೂ. ದಂಡ ಇಲ್ಲವೆ 2 ತಿಂಗಳ ಕಠಿಣ ಶಿಕ್ಷೆಯನ್ನು ಇಲ್ಲಿಯ ರೆಸಿಟೆಂಟ್ ಮ್ಯಾಜಿಸ್ಟ್ರೇಟರಾದ ಎಸ್. ಆರ್. ಕ್ಷಿನಾಯಿಕ ಇವರು ವಿಧಿಸಿದರು.

ಸೈನ್ಯದಿಂದ ನಿವೃತ್ತರಾದರು

ನವದೆಹಲಿ— ಇದೇ ಮೇ 31 ನೇ ತಾರೀಖಿನಹರೆಗೆ ಒಟ್ಟು 701203 ಮಂದಿ ಸೈನ್ಯದಿಂದ ನಿವೃತ್ತರಾಗಿದ್ದಾರೆಂದು ಗೊತ್ತಾಗಿದೆ. ಅಂದರೆ ಜುಲೈ 31 ರನ್ನೇಳಿಗೆ ನಿವೃತ್ತಿಯಾಗಬೇಕಾದ 850000 ಮಂದಿಯಲ್ಲಿ ಸುಮಾರು ಶೇಕಡಾ 82.5 ಭಾಗ ಕಳೆದಂತಾಯಿತು.

ಸುಳ್ಳು ಲೆಕ್ಕಕ್ಕಾಗಿ ಶಿಕ್ಷೆ

ನವದೆಹಲಿ ಜು 5— ಎಂ. ಐ. ಎಸ್. ಶಾಖೆಯ ಸಬ್ ಡಿವಿಜ್ ಆಫೀಸರಾದ ಇ. ಕೆ. ಕೃಷ್ಣನ್ನರು ಸುಳ್ಳು ಹೆಸರುಗಳನ್ನು ಲೆಕ್ಕದಲ್ಲಿ ತೋರಿಸಿ ಸಂಬಳ ತೆಗೆಯುತ್ತಿದ್ದುದರಿಂದ ಅವರಿಗೆ 18 ತಿಂಗಳು ಕಠಿಣ ಸಜಾ ಮತ್ತು 1000 ರೂ. ದಂಡ ವಿಧಿಸಲಾಗಿದೆ.

ಕೈ ನುಗ್ಗದ ಬಟ್ಟೆ

ಈಗ ಬಟ್ಟೆಯ ಬರವೇಕೆ ! ಕೈಮಗ್ಗದ ಬಟ್ಟೆಯು ಹಚ್ಚಹಸಿರೆಲೆಯೇ ! ನೇಯುವ ಕೂಲಿಯು ಈಗ ಹೆಚ್ಚರುವ ಹ್ಯು ಏಂದೂ ಹೆಚ್ಚರಲಿಲ್ಲ ಧಾನ್ಯಗಳ ಬೆಲೆ 1939–40 ರಲ್ಲಿ ನೆಯ್ಗೆಯ ಕೂಲಿಗಜಕ್ಕೆ ಒಂದು ಆಣೆಯಿತ್ತು. ಈಗ ಅದು ಆರರಷ್ಟು ಹೆಚ್ಚಿದೆ. ಈಗ ಬಟ್ಟೆಯಿಲ್ಲದ ಬರವಲ್ಲ ಬಂದಿರುವದು, ಭರಿಗಲಾರದ ಬೆಲೆಯುಳ್ಳ ಬರವಿದು. 1942 ರಲ್ಲಿ ನೂಲಿನ ಬೆಲೆಯು ನಿಯಂತ್ರಣ ಇರಲಿಲ್ಲ. ಆಗ 20 ನೇ ನಂಬರ ನೂಲು 10 ಪೌಂಡುಗಳ ಕಟ್ಟನ್ನು 40 ರೂ. ಗಳಿಗೆ ಮಾರುತ್ತಿದ್ದರು. ಈಗ ಅದೇ ಕಟ್ಟಿನ ಬೆಲೆ 13 ರೂ. ಗಳು. ಆದರೂ ಬಟ್ಟೆಯು ಬೆಲೆ 1942 ರ ಬೆಲೆಗಿಂತ ಎರಡರಷ್ಟಕ್ಕಿಂತ ಹೆಚ್ಚಿದೆ. ನೆಯಿಗೆ ಕೂಲಿ ಅತ್ಯಧಿಕವಾಗಿ ಹೆಚ್ಚಿರುವುದೇ ಕಾರಣವು. ನಿತ್ಯ ಕೃತ್ಯಗಳಿಗೆ ಅವಶ್ಯಕವಾಗುವ ಎಲ್ಲಾ ಪದಾರ್ಥಗಳ ಬೆಲೆಯನ್ನು ನಿಗದಿ ಮಾಡಿದಲ್ಲಿ ಈ ಕಷ್ಟಗಳೆಲ್ಲಾ ನಿವಾರಣೆಯಾಗಬಹುದು.

ಅಶೋಕಾ ಫಾರ್ಮೆಸಿ

ಆ್ಯಸ್ಪಡೋಕಾರ್ಪ್ ಫ್ಲೈ ಸೂರು ಶಾಸ್ತ್ರೀಯವಾಗಿ ಮತ್ತು ಅನುಭವಸಿದ್ಧವಾದ ಔಷಧಗಳು ದೊರೆಯುತ್ತದೆ

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆಣೆ
ಸೋಮವಾರದ ಸಂಚಿಕೆ
ವಾರ್ಷಿಕಚಂದಾ
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12-0

ಇದಕ್ಕೇನನ್ನಬೇಕು ?

ಮಿಸೆಸ್ ಯಲಲಿ ಬಿಯಾಂಟ್ ದಿ 15-6-46 ರಲ್ಲಿ ಹೀಗೆ ನುಡಿದಿರುವಳು–

ಕೋಟಿಗಟ್ಟಲೆ ಜನರು ಸ್ವಾತಂತ್ರ್ಯಕ್ಕಾಗಿ ಆಕ್ರೋಶಪಡುತ್ತಿರುವರು. ಅದಕ್ಕೆ ಬಾಧ್ಯರು ನಾವು. ಬ್ರಿಟಿಷ್ ಸಾಮ್ರಾಜ್ಯ ತತ್ವವು ನೆರೆತುಹೋಗಿದೆಯೆಂದು ಅಟ್ಲೀ ಪ್ರಧಾನಿ ನುಡಿದಿರುವನು. ಆದರೆ ಸಾಮ್ರಾಜ್ಯ ಇನ್ನೂ ಹಿಂದಿನಂತೆಯೇ ಇದೆ. ಅಲ್ಲಿ ನಡೆಯುವದಕ್ಕೆಲ್ಲಾ ನಾವೇ ಬಾಧ್ಯರು. ಕಾರ್ಮಿಕ ಸರಕಾರವು ಏರ್ಪಟ್ಟನಂತರ ಟ್ರಿನಿಡಾಡಿನಲ್ಲಿ ಖಡ್ಗವೃಗದ ಚರ್ಮದಿಂದ ಹೆಣೆದ ಕೊರಡಾಗಳಿಂದ ಹೊಡೆಯುವಿಕೆಯು ಆರಂಭವಾಗಿದೆ. ಕೆನಿಯಾ, ಯುಗಾಂಡಾಗಳಲ್ಲಿಯು ಪಶ್ಚಿಮ ಪ್ರಾಂತ್ಯಗಳಲ್ಲಿ ನಾಲ್ಕು ಸಾವಿರ ಮಂದಿ ದೇಶೀಯರು ಮನೆಮಠಗಳನ್ನು ಕಟ್ಟಿಕೊಂಡು, ಸ್ಕೂಲು, ಚರ್ಚುಗಳನ್ನು ಸ್ಥಾಪಿಸಿಕೊಂಡು ಜೀವಿಸುತ್ತಿರುವಾಗ ಅಲ್ಲಿಗೆ ಸೆರೆಸಲು ಹೋದ 500 ಮಂದಿ ಶ್ವೇತವರ್ಣದವರು, ಅವನ್ನು ಒಡಿಸಿ ಆ ಭೂಮಿಯನ್ನು ಆಕ್ರಮಿಸಿಕೊಳ್ಳುತ್ತಿರುವರು.

For Good Printing

L. N. Press

Sriramp et MYSORE

Get Medical Diplomas

At home :— Ayurvedic Homeopathic, Unani, etc Prospectus Free.

Old Indian Medical College
Kotgarh, Simla

ಸೂಚನೆ

ಪ್ರಥಮ ಏಕಾದಶೀ ಪಾರಣೆಯ ಪ್ರಯುಕ್ತ ನಾಳೆ ಪತ್ರಿಕೆ ಪ್ರಕಟಿಸಲ್ಪಡುವುದಿಲ್ಲ.

ಮ್ಯಾನೇಜರ್.

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ವೀಮರ್ ಮಾರ್ಕೀನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನ್ನಾಹನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟ್ಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನು ಇಟ್ಟು ಮಾಡುವುದಲ್ಲದೆ. ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು.

ಹಿಂ ಇದ್ದ ಕಾ

ಪಲ್ಲ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಳಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್ ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣಾ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮೆದರಾಸು.

Edited, Printed and published by M. S. Krishna Rao, at the Satyavadi Press, ChamarajaAgrahar, Myore

ಶಕ್ತಿ ಸುಧಾ

ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ

ನಿಸ್ಸಾರವಾದ, ನಶಿಸುವ ದೇಹಕ್ಕೆ ನವಚೈತನ್ಯವನ್ನು ಕೊಡುವುದರಲ್ಲಿ ಅದ್ವಿತೀಯವಾದುದು.

ವಿಳಾಸ — ಶಕ್ತಿ ಸುಧಾ, 1067 ಚಾಮರಾಜಪುರಂ, ಮೈಸೂರು.

SHAKTI SUDHA

For Rich Blood, Strong Nerves & Exuberant Vitality